# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **263** |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್.ಎಂ. ರಮೇಶ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 17/02/2022 |
| 4) | ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ಮಾಡುವ ಮಹಿಳೆಯರ ಮೇಲೆ ನಿರಂತರ ಶೋಷಣೆ ನಡೆಯುತ್ತಿದೆ ಎನ್ನುವ ದೂರುಗಳು ಬಂದಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಗಾರ್ಮೆಂಟ್ಸ್ ಮಹಿಳೆಯರ ಹಕ್ಕುಗಳ ರಕ್ಷಣೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯು ಕಾರ್ಖಾನೆಗಳ ಕಾಯ್ದೆ ಅಡಿಯಲ್ಲಿ ನಿಗದಿಪಡಿಸಿರುವಂತೆ ಮಹಿಳಾ ಕಾರ್ಮಿಕರ ಸುರಕ್ಷತೆ, ಔದ್ಯೋಗಿಕ ಆರೋಗ್ಯ, ಕಾರ್ಮಿಕ ಕಲ್ಯಾಣ, ನಿಗಧಿತ ಸಮಯದಲ್ಲಿ ವೇತನ ಪಾವತಿಯಾಗುತ್ತಿರುವ ಬಗ್ಗೆ ಮತ್ತು ಇ.ಎಸ್.ಐ ಅಡಿಯಲ್ಲಿ ಒಳಪಡದ ಮಹಿಳಾ ಕಾರ್ಮಿಕರಿಗೆ ಹೆರಿಗೆ ಸೌಲಭ್ಯ ನೀಡುತ್ತಿರುವ ಬಗ್ಗೆ ಇರುವ ಕಾನೂನುಗಳನ್ನು ಜಾರಿಗೊಳಿಸುತ್ತಿದ್ದು, ಇಲಾಖೆಯ ಅಧಿಕಾರಿಗಳು ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ಪರಿವೀಕ್ಷಿಸುವ ಸಂದರ್ಭದಲ್ಲಿ ಈ ಕುರಿತು ಪರಿಶೀಲಿಸುತ್ತಿದ್ದು, ಯಾವುದೇ ಶೋಷಣೆಯ ಪ್ರಕರಣಗಳು ಕಂಡು ಬಂದಲ್ಲಿ ಇಲಾಖೆಯ ಕಾರ್ಯ ವ್ಯಾಪ್ತಿಯಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಕಾರ್ಮಿಕ ಇಲಾಖೆಯ ಅಧಿಕಾರಿಗಳು ಕಾಲಕಾಲಕ್ಕೆ ಹಾಗೂ ದೂರಿನನ್ವಯ ತಪಾಸಣೆಯನ್ನು ನಡೆಸಿ ಕಾನೂನಿನ್ವಯ ಕ್ರಮ ಕೈಗೊಳ್ಳುತ್ತಿದ್ದಾರೆ.<br><br>ಕಾರ್ಮಿಕ ಇಲಾಖೆಯು ವಿವಿಧ ಕಾರ್ಮಿಕ ಕಾಯ್ದೆಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಮಹಿಳೆಯರು ಸೇರಿದಂತೆ ಎಲ್ಲಾ ಕಾರ್ಮಿಕರ ಹಕ್ಕುಗಳ ರಕ್ಷಣೆಗೆ ಕ್ರಮ ಕೈಗೊಳ್ಳಲಾಗುತ್ತದೆ. ಕಾಯ್ದೆಗಳ |

ವಿವರಗಳು ಈ ಕೆಳಕಂಡಂತಿರುತ್ತದೆ.

1. ಹೆರಿಗೆ ಭತ್ಯೆ ಕಾಯ್ದೆ–1961 ತಿದ್ದುಪಡಿ 2017 ರನ್ವಯ ಗರ್ಭವತಿ ಮಹಿಳೆಗೆ 26 ವಾರಗಳ ವೇತನ ಸಹಿತ ರಜೆಯನ್ನು ಉದ್ಯೋಗದಾತರು ನೀಡಬೇಕಾಗಿದ್ದು ಇದನ್ನು ಮತ್ತು ಹೆರಿಗೆ ಭತ್ಯೆ ಪಾವತಿಸದೆ ಇರುವ ದೂರು ಬಂದಲ್ಲಿ (ಇ.ಎಸ್.ಐ ಸೌಲಭ್ಯ ಹೊಂದದೆ ಇರುವ ಮಹಿಳೆ) ನಿಯಮಾನುಸಾರ ವಿಚಾರಣೆ ನಡೆಸಲಾಗುತ್ತದೆ ಹಾಗೂ ಮೊಕದ್ದಮೆ ಹೂಡಲಾಗುತ್ತದೆ. ಕಾರ್ಖಾನೆ ಕಾಯ್ದೆಯಡಿ ನೊಂದಾಯಿತವಾದ ಸಂಸ್ಥೆಗಳನ್ನು ಕಾರ್ಖಾನೆ ಮತ್ತು ಬಾಯ್ಲರ್ ಇಲಾಖೆಯ ಅಧಿಕಾರಿಗಳು ತಪಾಸಣೆ ನಡೆಸಿ ಕ್ರಮ ಕೈಗೊಳ್ಳುತ್ತಾರೆ.
2. ಸಮಾನ ವೇತನ ಕಾಯ್ದೆ,–1976ರಡಿಯಲ್ಲಿ ಪುರುಷ ಮತ್ತು ಮಹಿಳಾ ಕಾರ್ಮಿಕರು ಒಂದೇ ರೀತಿಯ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅವರ ವೇತನದಲ್ಲಿ ತಾರತಮ್ಯವಿದ್ದಲ್ಲಿ ವ್ಯತ್ಯಾಸದ ವೇತನಕ್ಕೆ ಕ್ಲೇಂ ಅರ್ಜಿ ಹೂಡುವುದರೊಂದಿಗೆ ದಾಖಲೆಗಳನ್ನು ನಿರ್ವಹಿಸದೇ ಇದ್ದಲ್ಲಿ ಮೊಕದ್ದಮೆಗಳನ್ನು ಹೂಡಲಾಗುತ್ತದೆ.
3. ಕನಿಷ್ಟ ವೇತನ ಕಾಯ್ದೆ 1948 ರಡಿ ಕನಿಷ್ಟ ವೇತನ ಪಾವತಿಸದಿದ್ದಲ್ಲಿ ಕ್ಲೇಂ ಅರ್ಜಿಗಳನ್ನು ಹೂಡಲಾಗುತ್ತದೆ ಹಾಗೂ ದಾಖಲೆಗಳನ್ನು ನಿರ್ವಹಿಸದೇ ಇದ್ದಲ್ಲಿ ಮೊಕದ್ದಮೆ ಹೂಡಲಾಗುತ್ತದೆ.
4. ವೇತನ ಪಾವತಿ ಕಾಯ್ದೆ–1936 ರಡಿಯಲ್ಲಿ ಉದ್ಯೋಗದಾತರು ವೇತನವನ್ನು ಸಕಾಲದಲ್ಲಿ ಪಾವತಿಸದೆ ಹಾಗೂ ಕಾನೂನು ಬಾಹಿರ ಕಡಿತಗಳನ್ನು ಮಾಡಿದಲ್ಲಿ ಕ್ಲೇಂ ಅರ್ಜಿ ಹೂಡುವುದರೊಂದಿಗೆ ದಾಖಲೆಗಳನ್ನು ನಿರ್ವಹಿಸದೇ ಇದ್ದಲ್ಲಿ ಮೊಕದ್ದಮೆಗಳನ್ನು ಹೂಡಲಾಗುತ್ತದೆ. ಕಾರ್ಖಾನೆ ಕಾಯ್ದೆಯಡಿ ನೊಂದಾಯಿತ ಸಂಸ್ಥೆಗಳನ್ನು ಕಾರ್ಖಾನೆ ಮತ್ತು ಬಾಯ್ಲರ್ ಇಲಾಖೆಯ ಅಧಿಕಾರಿಗಳು ತಪಾಸಣೆ ನಡೆಸಿ ಕ್ರಮ ಕೈಗೊಳ್ಳುತ್ತಾರೆ
5. ಬೋನಸ್ ಪಾವತಿ ಕಾಯ್ದೆ–1965 ರಡಿ ಮಹಿಳಾ ಕಾರ್ಮಿಕರಿಗೆ ಶಾಸನಾತ್ಮಕ ಬೋನಸ್ ಪಾವತಿಸದೆ ಇದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ.
6. ಉಪಧನ ಪಾವತಿ ಕಾಯ್ದೆ–1972 ರಡಿ ನಿಯಮಾನುಸಾರ ಉಪಧನವನ್ನು ಪಾವತಿಸದೆ ಇದ್ದಲ್ಲಿ ಸಂಬಂಧಿಸಿದ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಿದಲ್ಲಿ ಕ್ರಮ ವಹಿಸಲಾಗುವುದು.
7. ಕೈಗಾರಿಕಾ ವಿವಾದ ಕಾಯ್ದೆ–1947 ರಡಿಯಲ್ಲಿ ಕಾರ್ಮಿಕರಿಗೆ ಕೆಲಸ ನಿರಾಕರಿಸಿದಲ್ಲಿ, ಲೇ–ಆಫ್, ರಿಟ್ರೆಂಚ್‌ಮೆಂಟ್, ಲಾಕ್‌ಔಟ್, ಸಂಸ್ಥೆಯ ಮುಚ್ಚುವಿಕೆ ಉಂಟಾದಲ್ಲಿ ನಿಯಾಮಾನುನುಸಾರ ಕ್ರಮ ವಹಿಸಲಾಗುವುದು. ಕಾರ್ಮಿಕರಿಗೆ ಬರಬೇಕಾದ ಬಾಕಿ ಇದ್ದಲ್ಲೂ ಕಾಯ್ದೆ ಪ್ರಕಾರ ನ್ಯಾಯ ಪಡೆದುಕೊಳ್ಳಬಹುದು.

| | | |
|---|---|---|
| | | 8. ಗಾರ್ಮೆಂಟ್ಸ್ ಸಂಸ್ಥೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಲೈಂಗಿಕ ಕಿರುಕುಳದ ದೂರು ಬಂದಲ್ಲಿ ಸಂಬಂಧಿಸಿದ ಇಲಾಖೆಗಳ ಜೊತೆ ಭೇಟಿ ನೀಡಿ ಆಂತರಿಕ ದೂರು ಸಮಿತಿ ರಚಿಸಿರುವ ಕುರಿತು ಖಾತರಿ ಪಡಿಸಿಕೊಳ್ಳುವುದು ಹಾಗೂ ನಡಾವಳಿಗಳನ್ನು ದಾಖಲಿಸುವುದು ಮತ್ತು ಪರಿಶೀಲಿಸುವುದು.<br><br>9. ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ಮಹಿಳಾ ಕಾರ್ಮಿಕರಿಗೆ ವನಿತಾ ಸಂಗಾತಿ ಯೋಜನೆ ಜಾರಿಗೆ ತಂದಿದ್ದು, ಯೋಜನೆಯ ಪ್ರಕಾರ ಮಹಿಳಾ ಕಾರ್ಮಿಕರಿಗೆ ಬಿ.ಎಂ.ಟಿ.ಸಿ ವತಿಯಿಂದ ಉಚಿತ ಬಸ್ ಪಾಸ್ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>10. ಕಾರ್ಖಾನೆಗಳ ಕಾಯ್ದೆ-1948ರ ಪ್ರಕಾರ ಕಲ್ಯಾಣ ಕಾರ್ಯಕ್ರಮಗಳಾದ ಕುಡಿಯುವ ನೀರಿನ ವ್ಯವಸ್ಥೆ, ಪ್ರತ್ಯೇಕ ಶೌಚಾಲಯ, ವಿಶ್ರಾಂತಿ ಕೊಠಡಿ, ಶಿಶುವಿಹಾರ, ಆರೋಗ್ಯ ಮತ್ತು ಸುರಕ್ಷತೆಗೆ ಕ್ರಮ ವಹಿಸಲಾಗುವುದು.<br><br>11. ಕರ್ನಾಟಕ ಕೈಗಾರಿಕಾ ಸಂಸ್ಥೆಗಳು (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಕಾಯ್ದೆ, 1963 ರ ಪ್ರಕಾರ 5 ರಾಷ್ಟ್ರೀಯ ಹಬ್ಬಗಳು ಮತ್ತು 5 ಹಬ್ಬದ ರಜೆಗಳನ್ನು ಕಾರ್ಮಿಕರಿಗೆ ಒದಗಿಸಲು ಕ್ರಮ ವಹಿಸಲಾಗುವುದು.<br><br>12. ಕರ್ನಾಟಕ ಜೀವನಾ ನಿರ್ವಹಣಾ ಭತ್ಯೆ ಕಾಯ್ದೆ 1988 ರಡಿ ಅಮಾನತ್ತುಗೊಂಡ ಕಾರ್ಮಿಕರಿಗೆ ಜೀವನಾ ನಿರ್ವಹಣಾ ಭತ್ಯೆ ನಿಯಮಾನುಸಾರ ಕೈಗೊಳ್ಳಲಾಗುವುದು.<br><br>13. ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ -1965 ರಡಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಧನ ಸಹಾಯ, ಕಾರ್ಮಿಕರಿಗೆ ವೈದ್ಯಕೀಯ ನೆರವು ಅಪಘಾತ ಧನ ಸಹಾಯ, ಹೆರಿಗೆ ಭತ್ಯೆ, ಅಂತ್ಯಸಂಸ್ಕಾರ ವೆಚ್ಚ, ವೈದ್ಯಕೀಯ ತಪಾಸಣಾ ಶಿಬಿರ ನಡೆಸಲು ಧನ ಸಹಾಯ, ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ಕಾರ್ಮಿಕ ಸಂಘಗಳಿಗೆ ಧನ ಸಹಾಯಗಳನ್ನು ಪಾವತಿಸಲಾಗುತ್ತದೆ. |
| ಆ) | ರಾಜ್ಯದ ಅಸಂಘಟಿತ ಕಾರ್ಮಿಕರ ಹಿತರಕ್ಷಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ: (ವಿವರ ನೀಡುವುದು) | ಕೇಂದ್ರ ಸರ್ಕಾರವು ಅಸಂಘಟಿತ ವರ್ಗಗಳ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಸೂಕ್ತ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ,-1996 ಮತ್ತು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008 ಗಳನ್ನು ಜಾರಿಗೆ ತಂದಿರುತ್ತದೆ.<br>ಕರ್ನಾಟಕ ಸರ್ಕಾರವು ಈ ಕಾಯ್ದೆಗಳಿಗೆ ನಿಯಮಾವಳಿಗಳನ್ನು ರೂಪಿಸಿ ಈ ಕೆಳಕಂಡ ಮಂಡಳಿಗಳನ್ನು ರಚಿಸಿ ವಿವಿಧ ಸಾಮಾಜಿಕ |

| | | |
|---|---|---|
| | | ಭದ್ರತಾ ಸೌಲಭ್ಯಗಳನ್ನು ಒದಗಿಸುತ್ತಿದೆ.<br>**1. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಂಡಳಿ**<br>ಈ ಮಂಡಳಿಯ ಅಸಂಘಟಿತ ವಲಯಕ್ಕೆ ಸೇರಿದ ಒಂದು ವರ್ಗವಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಮಂಡಳಿಯ ಫಲಾನುಭವಿಗಳಾಗಿ ನೋಂದಾಯಿಸಕೊಂಡು ಅವರಿಗೆ ಮತ್ತು ಅವರ ಅವಲಂಭಿತರ ಸಮಾಜಿಕ ಭದ್ರತೆಗಾಗಿ ಮಂಡಳಿಯು ರೂಪಿಸಿರುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ವಿವರವನ್ನು **ಅನುಬಂಧದಲ್ಲಿ** ಸಲ್ಲಿಸಿದೆ.<br><br>**2. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ**<br>ಕರ್ನಾಟಕ ರಾಜ್ಯ ಸರ್ಕಾರವು ಪ್ರಸ್ತುತ 43 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ಗುರುತಿಸಿದೆ.<br><br>ರಾಜ್ಯದ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ರಾಜ್ಯ ಸರ್ಕಾರದ ಈ ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸುತ್ತಿದೆ.<br><br>(1) ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:- ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br><br>(ಅ) ಅಪಘಾತ ಪರಿಹಾರ ಸೌಲಭ್ಯ : ಯೋಜನೆಯಡಿ, ಅಪಘಾತದಿಂದ ಮರಣ ಹೊಂದಿದ ಪ್ರಕರಣಗಳಲ್ಲಿ ರೂ. 5 ಲಕ್ಷದ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಪ್ರಕರಣಗಳಲ್ಲಿ ರೂ.2ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದವರಿಗೆ ರೂ.1ಲಕ್ಷದವರೆಗೆ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ.<br><br>(ಆ) ಶೈಕ್ಷಣಿಕ ಧನ ಸಹಾಯ : ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.<br><br>(2) ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-<br>ಈ ಯೋಜನೆಯಡಿ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, |

| | | |
|---|---|---|
| | | ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಿ ಸ್ಮಾರ್ಟ್‌ಕಾರ್ಡ್ ಮಾತ್ರ ವಿತರಿಸಲಾಗುತ್ತಿದ್ದು, ಯಾವುದೇ ಸೌಲಭ್ಯವನ್ನು ಒದಗಿಸುತ್ತಿರುವುದಿಲ್ಲ.<br><br>(3) ಕೋವಿಡ್-19 ರ ವಿಶೇಷ ಪ್ಯಾಕೇಜ್:<br><br>(ಅ)ಕೋವಿಡ್-19 ರ ಮೊದಲನೆ ಅಲೆಯ ವಿಶೇಷ ಪ್ಯಾಕೇಜ್: 2020ನೇ ವರ್ಷದ ಕೋವಿಡ್-19ರ ಮೊದಲನೆ ಅಲೆಯ ಲಾಕ್‌ಡೌನ್ ಕಾರಣ ಸಂಕಷ್ಟಕ್ಕೊಳಗಾದ ಅಗಸ ಮತ್ತು ಕ್ಷೌರಿಕ ವೃತ್ತಿ ನಿರ್ವಹಿಸುತ್ತಿರುವ ಅಸಂಘಟಿತ ಕಾರ್ಮಿಕರಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿದ ತಲಾ ರೂ.5,000/-ಗಳ ಒಂದು ಬಾರಿಯ ನೆರವಿನ ವಿಶೇಷ ಪ್ಯಾಕೇಜ್ ಅಡಿ ಈವರೆಗೆ 1,24,786 ಕಾರ್ಮಿಕರಿಗೆ ಒಟ್ಟು ರೂ.62.39 ಕೋಟಿಗಳ ನೆರವನ್ನು ವಿತರಿಸಲಾಗಿದೆ.<br><br>(ಆ) ಕೋವಿಡ್-19 ರ ಎರಡನೆ ಅಲೆಯ ವಿಶೇಷ ಪ್ಯಾಕೇಜ್:<br><br>2021ನೇ ವರ್ಷದ ಕೋವಿಡ್-19ರ ಎರಡನೇ ಅಲೆಯ ಲಾಕ್‌ಡೌನ್ ಕಾರಣ ಸಂಕಷ್ಟಕ್ಕೊಳಗಾದ 11 ವರ್ಗಗಳಾದ ಅಸಂಘಟಿತ ಕಾರ್ಮಿಕರಾದ ಅಗಸರು, ಕ್ಷೌರಿಕರು, ಗೃಹಕಾರ್ಮಿಕರು, ಟೈಲರ್‌ಗಳು, ಮೆಕ್ಯಾನಿಕ್, ಚಿಂದಿ ಆಯುವವರು, ಹಮಾಲರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿಕಾರ್ಮಿಕರಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿದ ತಲಾ ರೂ. 2,000/-ಗಳ ಒಂದು ಬಾರಿಯ ನೆರವಿನ ವಿಶೇಷ ಪ್ಯಾಕೇಜ್‌ನಡಿ ಈವರೆಗೆ 11,89,490 ಅರ್ಹ ಅರ್ಜಿದಾರರಿಗೆ ರೂ. 237.89 ಕೋಟಿಗಳ ನೆರವನ್ನು ವಿತರಿಸಲಾಗಿದೆ. |
| ಇ) | ರಾಜ್ಯದಲ್ಲಿ ಇನ್ನೂ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳಲಾಗುತ್ತಿದೆ ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ: ಬಾಲಕಾರ್ಮಿಕರನ್ನು ಬಳಸಿಕೊಂಡು ದುಡಿಸಿಕೊಳ್ಳುವವರಿಗೆ ಯಾವ ಶಿಕ್ಷೆ ನೀಡಲಾಗುತ್ತಿದೆ: | ರಾಜ್ಯದಲ್ಲಿ ಇನ್ನೂ ಬಾಲಕಾರ್ಮಿಕರನ್ನು ನಿಯೋಜಿಸಿಕೊಳ್ಳುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>ರಾಜ್ಯ ಸರ್ಕಾರವು ಬಾಲ್ಯಾವಸ್ಥೆ ಹಾಗೂ (ಕಿಶೋರಾವಸ್ಥೆ(ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಅನ್ನು ರಾಜ್ಯಾದ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆಗೊಳಿಸುವ ನಿಟ್ಟಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ;<br>1. ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಕಲಂ 16 ಹಾಗೂ 17ರ ಅಡಿಯಲ್ಲಿ ನಿರೀಕ್ಷಕರಾಗಿ ಅಧಿಸೂಚಿಸಲ್ಪಟ್ಟ ಅಧಿಕಾರಿಗಳ ಹೋಬಳಿವಾರು ತಂಡವನ್ನು ರಚಿಸಿ, ಹಠಾತ್ ಹಾಗೂ ಯೋಜಿತ ದಾಳಿಗಳನ್ನು ನಡೆಸಿ, ಬಾಲಕಾರ್ಮಿಕರ ಪತ್ತೆ ಮಾಡಿ ನಂತರ ಅವರನ್ನು ಕೆಲಸದಿಂದ ಬಿಡುಗಡೆ ಮಾಡಿ ಕೆಲಸಕ್ಕೆ ನೇಮಕ ಮಾಡಿಕೊಂಡಿದ್ದ ಮಾಲೀಕರ ಮೇಲೆ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 ಪ್ರಾವಧಾನಗಳನ್ವಯ ನಡೆಸಲಾಗುತ್ತದೆ. |

| | | |
|---|---|---|
| | | ಪುನರ್ವಸತಿಗೊಳಿಸಲಾದ ಬಾಲಕಾರ್ಮಿಕರಿಗೆ ಶೈಕ್ಷಣಿಕ ತರಬೇತಿ ನೀಡಿ ನಂತರ ಮುಖ್ಯವಾಹಿನಿಗೆ ದಾಖಲು ಮಾಡಲಾಗುವುದು. ಬಾಲಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡ ಮಾಲೀಕರಿಗೆ ಪ್ರತಿ ಪ್ರಕರಣಕ್ಕೆ ರೂ. 20,000/- ರಿಂದ ರೂ. 50,000/-ವರೆಗೆ ದಂಡ ಹಾಗೂ ಆರು (6) ತಿಂಗಳುಗಳಿಂದ ಮೂವತ್ತಾರು (36) ತಿಂಗಳುಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ಎರಡನ್ನು ಸಹ ವಿಧಿಸಲು ಅವಕಾಶವಿದ್ದು, ಈ ಪ್ರವಾದಾನಗಳನ್ವಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>ಕಳೆದ 3 (ಮೂರು) ವರ್ಷಗಳಲ್ಲಿ ರಾಜ್ಯಾದ್ಯಂತ 63263 ತಪಾಸಣೆಗಳನ್ನು ನಡೆಸಲಾಗಿದ್ದು, 724 ಮಕ್ಕಳನ್ನು ಕೆಲಸದಿಂದ ಬಿಡುಗಡೆಗೊಳಿಸಲಾಗಿದ್ದು, ಉಲ್ಲಂಘನೆಗಳು ಕಂಡುಬಂದ 301 ಪ್ರಕರಣಗಳನ್ನು ಸಂಬಂದಿಸಿದ ನ್ಯಾಯಾಲಯಗಳಲ್ಲಿ ದಾಖಲಿಸಲಾಗಿದ್ದು, ಇತ್ಯರ್ಥವಾದ 55 ಪ್ರಕರಣಗಳಿಗೆ ಸಂಬಂಧಿಸಿದಂತೆ ರೂ.9,13,800.00 ಗಳ ಮೊತ್ತದ ದಂಡವನ್ನು ವಿಧಿಸಲಾಗಿರುತ್ತದೆ ಹಾಗೂ 3 ಪ್ರಕರಣಗಳಲ್ಲಿ ತಪ್ಪಿತಸ್ತ ಮಾಲಿಕರಿಗೆ 6 ತಿಂಗಳು ಜೈಲು ಶಿಕ್ಷೆಯನ್ನು ವಿಧಿಸಲಾಗಿರುತ್ತದೆ |
| ಈ) | ಜಿಲ್ಲಾ ಕೇಂದ್ರಗಳ ಕಾರ್ಮಿಕ ಸಾಮಾಜಿಕ ಭದ್ರತೆಗೆ ಸರ್ಕಾರ ಯಾವ ಯೋಜನೆಗಳನ್ನು ಜಾರಿಗೊಳಿಸಿದೆ: (ಮಾಹಿತಿ ನೀಡುವುದು) | ಮೇಲ್ಕಂಡ ಕ್ರ.ಸಂ (ಅ) ದಲ್ಲಿ ವಿವರಿಸಿರುವ ಸಾಮಾಜಿಕ ಭದ್ರತಾ ಯೋಜನೆಗಳು ಜಿಲ್ಲಾ ಕೇಂದ್ರಗಳಿಗೂ ಸಹ ಅನ್ವಯಿಸುತ್ತದೆ. |
| ಉ) | ಕಾರ್ಮಿಕರ ಭವಿಷ್ಯದ ದೃಷ್ಟಿಯಿಂದ ಈಗ ಇರುವ ಕಾರ್ಮಿಕರ ಕಲ್ಯಾಣ ನಿಧಿ ಯೋಜನೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? | **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಮಂಡಳಿ** ಮಂಡಳಿಯ ವತಿಯಿಂದ ಫಲಾನುಭವಿಗಳಿಗೆ ನೀಡುತ್ತಿರುವ ಸೌಲಭ್ಯಗಳನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ನಿಯಮ, 2006 ಕ್ಕೆ ತಿದ್ದುಪಡಿ ತರುವ ಮುಖಾಂತರ ಕಾಲಕಾಲಕ್ಕೆ ಸೌಲಭ್ಯಗಳ ಸಹಾಯ ಧನದ ಮೊತ್ತವನ್ನು ಹೆಚ್ಚಿಸಲಾಗುತ್ತಿದೆ. |

**ಸಂಖ್ಯೆ: 12 ಕಾಬಾನಿ 2022**

**(ಅರಬೈಲು ಶಿವರಾಂ ಹೆಬ್ಬಾರ್)**
**ಕಾರ್ಮಿಕ ಸಚಿವರು**